ಸಭೆ ಸಮಾರಂಭ, ಸಮ್ಮೇಳನಗಳಲ್ಲಿ. ಹಾಗೆ ಕಂಡಾಗೆಲ್ಲ ಅವರ ಮೊದಲ ಮಾತು, 'ಹೆಂಗಿದ್ದಿ? ಈಗೇನು ಮಾಡಕ್ಕತ್ತಿ?'. ಮಾಡಬೇಕು ಎಂಬ ಒತ್ತಾಸೆ ಇತ್ತು ಆ ದನಿಯೊಳಗೆ. ಅದು ನನ್ನ ಬಗೆಗಿನ ನಂಬಿಕೆಯೊ, ನಿರೀಕ್ಷೆಯೊ ನನಗೆ ತಿಳಿಯದು.

ಅಂದೋ ಇಂದೋ ಕಾಣುವ ಕಲಬುರ್ಗಿಯವರ ದೂರ ಅಳಿದು ಸ್ನೇಹ ಸಂಬಂಧ ಕೌಟುಂಬಿಕ ನೆಲೆಗೂ ವಿಸ್ತರಿಸಿದ್ದು ಅವರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿ ಬಂದಾಗ ಮತ್ತು ನೆರೆಹೊರೆಯವರಾಗಿ ವಿ.ವಿ. ಕ್ವಾಟರ್ಸ್‌ನ ಸಹವಾಸದಲ್ಲಿ. ಅದಕ್ಕೂ ಒಂದು ಹಿನ್ನೆಲೆಯಿದೆ. ಕಲಬುರ್ಗಿಯವರ ಕುಟುಂಬ ಕನ್ನಡ ವಿ.ವಿ. ಆವರಣದ ಕುಲಪತಿಗಳ ನಿವಾಸಕ್ಕೆ ಹೊರಟಾಗ, 'ನಾವಡ ನೀ ಕ್ವಾಟರ್ಸ್‌ಗೇ ಬರಬೇಕ. ನೀ ಹಿರಿಯ ಪ್ರಾಧ್ಯಾಪಕ ಇದ್ದಿ, ವಿಶ್ವವಿದ್ಯಾಲಯ ಅಂದ್ರ ಮುಂಜಾನಿ 10ರಿಂದ ಸಂಜಿ 5 ಗಂಟೆ ತನಕ ತೆರೆಯೋ ಕಚೇರಿ ಅಲ್ಲದು, ಹುಡುಗರು ಇರ್ತಾರಾ, ಅಧ್ಯಾಪಕರು ಅವರಿಗೆ ಯಾವ ಹೊತ್ತಿಗೂ ಸಿಗೋ ಹಾಂಗಿರಬೇಕ ನೋಡ' ಎಂದರು. ನಾವಡ ಅವರು ಈ ಸಂಗತಿ ಮನೆಯಲ್ಲಿ ಹೇಳಿದಾಗ, 'ನಾನು ಸುತರಾಂ ಒಪ್ಪುವುದಿಲ್ಲ, ವಯಸ್ಸಾದ ಹಿರಿಯರು ದೂರದ ಮಂಗಳೂರಲ್ಲಿ ಇದ್ದಾರೆ. ಮಕ್ಕಳಿಬ್ಬರೂ ಹೊರ ಊರಲ್ಲಿ ಓದುತ್ತಿದ್ದಾರೆ. ದಿನನಿತ್ಯದ ಬದುಕಿಗೆ ಹೊಸಪೇಟೆಯನ್ನು ಅವಲಂಬಿಸಬೇಕು. ಈ ಪರಿಸ್ಥಿತಿಯಲ್ಲಿ ಆ ಗುಡ್ಡ-ಬೆಟ್ಟದ ನಡುವಿನ ಹಾವು, ಕರಡಿಗಳ ಲೋಕಕ್ಕೆ ಖಂಡಿತ ಹೋಗೋದು ಬೇಡ' ಅಂದೆ. ಆದರೆ ಕಡೆಗೂ ಗೆದ್ದದ್ದು ಕಲಬುರ್ಗಿಯವರ ಸ್ನೇಹ, ಸೋತದ್ದು ಕುಟುಂಬದ ಕೋರಿಕೆ. ಕಲಬುರ್ಗಿಯವರ ಸ್ನೇಹದ ಶಕ್ತಿಯೇ ಅಂಥದು. ಎದುರಿರುವವರಿಗೆ 'ಇಲ್ಲ' ಎನ್ನಲು ನಾಲಿಗೆಯೇ ಬರುವುದಿಲ್ಲ. ಹಾಗೆಂದು ಅದು ಭಯದ ಅನುಭವ ಅಲ್ಲ, ಅಧಿಕಾರದ ದರ್ಪವೂ ಅಲ್ಲ. ಇದು ಕಲಬುರ್ಗಿಯವರ ತಾಕತ್ತು.

ಕಲಬುರ್ಗಿಯವರು ಕನ್ನಡ ವಿ.ವಿ.ಯ ಕುಲಪತಿಯಾಗಿ ನೇಮಕವಾದಾಗ 'ಕಲಬುರ್ಗಿ ಜಾತಿವಾದಿ' ಎಂಬ ಗುಸು ಗುಸು ಗಾಳಿಸುದ್ದಿ ವಿ.ವಿ. ಆವರಣದಲ್ಲಿ ಹಬ್ಬಿ ಬೀಸಿತ್ತು. ಒಂದು ಅರ್ಥದಲ್ಲಿ ಅದು ದಿಟ. ಕಲಬುರ್ಗಿಯವರ ಜಾತಿ ಪರಿಕಲ್ಪನೆಯಲ್ಲಿ ಇದ್ದದ್ದು ಎರಡೇ ಜಾತಿ-ಒಂದು ದುಡಿಯುವ ಜಾತಿ, ಇನ್ನೊಂದು ದುಡಿಯದ ಜಾತಿ. ಅವರಿಗಿದ್ದ ಚಟ ಒಂದೇ ಒಂದು-ಕೆಲಸ ಮಾಡುವುದು ಮತ್ತು ಮಾಡಿಸುವುದು. ಸಿಟ್ಟು ಎಂದರೆ ಪಗಾರ ಪಡೆದು ದುಡಿಯದ ಸೋಮಾರಿಗಳ ಬಗ್ಗೆ. ಸಂಪತ್ತು ಎಂದರೆ ಆರ್ದ್ರ, ಆಪ್ತತೆ. ಸಮೃದ್ಧಿ ಎಂದರೆ ಓದು, ಬರಹ. ಈ ಎಲ್ಲಾ ಹಿರಿತನದಿಂದಲೇ ಕನ್ನಡ ನಾಡು ಇಡಿಯಾಗಿ ಕಲಬುರ್ಗಿಯವರನ್ನು 'ಐಕಾನ್' ಆಗಿ ಸ್ವೀಕರಿಸಿದ್ದು.

ಕಲಬುರ್ಗಿಯವರ ಕಾಯಕ ನಿಷ್ಠೆ ಯಾವ ಪರಿಯದು ಎಂದರೆ ತಾನಷ್ಟೇ ಅಲ್ಲ, ತನ್ನ ಜತೆಗಿದ್ದವರೂ ಕಾಯಕ ಜೀವಿಯಾಗಬೇಕು ಹಾಗೆ. ಡಾ. ಚಂದ್ರಶೇಖರ ಕಂಬಾರರು ಕುಲಪತಿಯಾಗಿದ್ದ ಕಾಲದಲ್ಲಿ ನಾವಡರನ್ನು ಪ್ರಸಾರಾಂಗದ ನಿರ್ದೇಶಕರಾಗಿ ನಿಯುಕ್ತಿಗೊಳಿಸಿದ್ದು ಕಲಬುರ್ಗಿಯವರ ಅಧಿಕಾರವಧಿಯಲ್ಲೂ ಮುಂದುವರಿಸಲಾಯಿತು. ಕಲಬುರ್ಗಿ ಮತ್ತು ನಾವಡರ ನಡುವೆ ಒಂದು ವಿಶೇಷ ನಂಟು. ಸಮಾನ ನಡೆ, ನುಡಿ, ನಿಲುವು ಇಬ್ಬರದು. ಅದು ಸರಳತೆ ಇರಬಹುದು, ಸಹೃದಯತೆ ಇರಬಹುದು, ಪ್ರಾಮಾಣಿಕತೆ ಇರಬಹುದು, ಕಾಯಕತನ ಇರಬಹುದು, ಚುರುಕುತನ ಇರಬಹುದು, ಶುದ್ಧ ಚಾರಿತ್ರ್ಯ ಇರಬಹುದು. ನಾವು ಮನೆಯಲ್ಲಿ ತಮಾಷೆಯಾಗಿ ಆಡುತ್ತಿದ್ದೆವು. ಕಲಬುರ್ಗಿ-ನಾವಡ ಅಂದರೆ 'ಸುಬ್ರಹ್ಮಣ್ಯ ಜೋಡಿ' ಎಂದು. ವಿಶ್ವವಿದ್ಯಾಲಯದ ದಿನದ ವೃತ್ತಿ ಹೊತ್ತು ಮುಗಿದರೂ ಇವರ ಕಾಯಕ ವ್ರತ ಮುಂದುವರಿಯುತ್ತಿತ್ತು. ಇಬ್ಬರೂ ಹಂಪಿಯ ಸುತ್ತಾಟ, ಹುಡುಕಾಟಕ್ಕೆ ಹೊರಟರೆ ಉಮಕ್ಕ ನನಗೆ ಫೋನ್ ಮಾಡುವರು- 'ನಾವಡ ಮನೆಗೆ ಬಂದಾರೇನು?' ಇಲ್ಲ, ಆ ಫೋನ್ ಸರದಿ ನನ್ನದಾಗುತ್ತಿತ್ತು. ನಾವಡ ಒಂದು ಮುಂಜಾನೆ ಮೂರು ಗಂಟೆಗೆ ಪ್ರಸಾರಾಂಗದ ಪ್ರಕಟಣೆಯ ಪ್ರೂಫ್ ತಿದ್ದುತ್ತ ಕುಳಿತಿದ್ದರು. 'ಹೀಗೆ ನಿದ್ದೆ ಬಿಟ್ಟು ದುಡಿಯುತ್ತೀರಲ್ಲ' ಎಂದಾಗ, 'ಇನ್ನು ಹತ್ತು ದಿನದಲ್ಲಿ ಈ ಪುಸ್ತಕ ಬಿಡುಗಡೆಯಾಗಬೇಕು. ಕಲಬುರ್ಗಿಯವರು ಬಿಡುಗಡೆಯ ದಿನಾಂಕ ನಿಶ್ಚಯ ಮಾಡಿದ್ದಾರೆ. ಅಲ್ಲದೆ ಈಗ 5 ಗಂಟೆಗೆ ಹೊಸಪೇಟೆಗೆ ಹೋಗಬೇಕು. ಬೆಂಗಳೂರಿನಿಂದ ಬಸ್‌ನಲ್ಲಿ ಪ್ರಸಾರಾಂಗದ ಮುದ್ರಿತ ಪುಸ್ತಕಗಳ ಕಟ್ಟು ಬರುತ್ತವೆ. ನಾನು ಅಲ್ಲಿದ್ದು ತೆಗೆದುಕೊಳ್ಳಬೇಕು. ಇದು ನನ್ನ ವಿಶ್ವವಿದ್ಯಾಲಯದ ಕೆಲಸ. ಅಂದರೆ ಅದು ನನ್ನ ಕೆಲಸ ನನ್ನ ಜವಾಬ್ದಾರಿ' ಎನ್ನುವ ಸಮಾಜಾಯಿಷಿ ನೀಡಿದರು. ಅದೇ ಬೆಳಗ್ಗೆ